ಮೂಲಭೂತ ಅಭಿವೃದ್ಧಿ ಸೆಸ್ ಇದರಡಿ ಸಂಗ್ರಹಿಸಿರುವ ಹಣವನ್ನು ಮೂಲಭೂತ ಅಭಿವೃದ್ಧಿ ಸೆಸ್ ನಿಧಿಯಲ್ಲಿ ಜಮೆ ಮಾಡಲಾಗಿದ್ದು ಈ ಹಣವು ಸರ್ಕಾರದಲ್ಲಿ ಇರುತ್ತದೆ.

ಈ) ಈ ಯೋಜನೆಯ ಕಾರ್ಯ ಸಾಧ್ಯತೆ ಬಗ್ಗೆ ಅಧ್ಯಯನಗಳು ನಡೆಸಲಾಗುತ್ತಿದ್ದು ತದನಂತರ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

**ಬೆಂಗಳೂರು ನಗರದಲ್ಲಿ ಗಂಟೆ ಗಾಡಿಗಳ ಮೂಲಕ ಕಸ ಸಂಗ್ರಹಣೆ**

1205 ( 1218) ಶ್ರೀ ದಿನೇಶ್ ಗುಂಡೂರಾವ್ ಗಾಂಧಿನಗರ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಗಂಟೆ ಗಾಡಿಗಳ ಮೂಲಕ ಕಸ ಎತ್ತುವ ಪದ್ಧತಿಯನ್ನು ಎಷ್ಟು ವಿಭಾಗ ( ವಾರ್ಡ್) ಗಳಲ್ಲಿ ಜಾರಿಗೊಳಿಸಲಾಗಿದೆ?

ಆ) ಈ ಗಾಡಿಗಳಲ್ಲಿ ಸಂಗ್ರಹಿಸಲು ಅನುಕೂಲವಾಗುವಂತೆ ಪರಿಸರಕ್ಕೆ ಹಾನಿಯುಂಟು ಮಾಡುವ ಪ್ಲಾಸ್ಟಿಕ್, ಗಾಜು ಹಾಗೂ ಪರಿಸರಕ್ಕೆ ಹಾನಿಕಾರಕವಲ್ಲದ ವಸ್ತುಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸುವ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗಿದೆಯೇ?

ಇ) ಹಾಗಿದ್ದಲ್ಲಿ, ಇದಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆಯೇ?

ಈ) ಗಂಟೆ ಗಾಡಿಗಳಲ್ಲಿ ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತಿರುವ (ಹಾನಿಕಾರಕ-ಹಾನಿಕಾರಕವಲ್ಲದ) ಕಸವನ್ನು ನಂತರ ಪಾಲಿಕೆ ಸಿಬ್ಬಂದಿ ಒಟ್ಟಿಗೆ ಮಿಶ್ರಣ ಮಾಡಿ ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಎಂ.ಕೃಷ್ಣ ( ಮುಖ್ಯಮಂತ್ರಿಗಳು)

ಅ) 112.

ಆ) ಹೌದು.

ಇ) ಹೌದು.

ಈ) ಹೌದು

ಒಂದು ಆರೋಗ್ಯ ವಾರ್ಡಿಗೆ ಒಂದೇ ವಾಹನದ ವ್ಯವಸ್ಥೆ ಇರುವುದರಿಂದ, ಸಂಗ್ರಹಿಸಿದ ಕಸವನ್ನು ಒಟ್ಟಿಗೆ ಸಾಗಿಸುತ್ತಿರುವುದು ಗಮನಕ್ಕೆ ಬಂದಿದೆ.

**ಜಾರಾದ ತಾಲ್ಲೂಕಿನಲ್ಲಿ ಅಗ್ನಿಶಾಮಕದಳ ಕಛೇರಿ ಸ್ಥಾಪನೆ**

1206 ( 1706) ಶ್ರೀ ಗುಂಡಪ್ಪ ವಕೀಲ್ ( ಔರಾದ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನಲ್ಲಿ ಅಗ್ನಿಶಾಮಕದಳದ ಕಛೇರಿ ನಿರ್ಮಾಣ ಕಾರ್ಯ ಸಂಪೂರ್ಣವಾಗಿ 2 ವರ್ಷಗಳಾದರೂ ಸಿಬ್ಬಂದಿ ಹಾಗೂ ವಾಹನ ಸೌಕರ್ಯ ಒದಗಿಸಿ, ಕಛೇರಿ ಪ್ರಾರಂಭಿಸದೇ ಇರುವ ಸಂಗತಿ ಸರಕಾರದ ಗಮನಕ್ಕೆ ಬಂದಿದೆಯೇ ಈ ರೀತಿ ವಿಳಂಬವಾಗಲು ಕಾರಣಗಳೇನು? ಇಂಥ ಕಛೇರಿಯ ಉದ್ಘಾಟನೆ ಸಂಭವವಿದೆಯೇ ಹಾಗಾದರೆ ಯಾವಾಗ?

ಶ್ರೀ ಮಲ್ಲಿಕಾರ್ಜುನ ಖರ್ಗೆ ( ಗೃಹ ಸಚಿವರು )

ಆ) ಜಾರಾದ್ ಪಟ್ಟಣಕ್ಕೆ ಒಂದು ಹೊಸ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಈಗಾಗಲೇ ಸರ್ಕಾರದಿಂದ ಮಂಜೂರಾತಿ ನೀಡಲಾಗಿದೆ. ಒಂದು ಹೊಸ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಈ ಕೆಳಗೆ ನಮೂದಿಸಿರುವ ಕನಿಷ್ಟ ಸೌಲಭ್ಯವು ಬೇಕಾಗಿರುತ್ತದೆ.

1. ಎರಡು ಎಕರೆ ಜಮೀನು

2. ಅಗ್ನಿಶಾಮಕ ಠಾಣೆಯ ಕಟ್ಟಡ ಮತ್ತು ಸಿಬ್ಬಂದಿಗಳ ವಸತಿ ಗೃಹಗಳು

3. 2 ಜಲವಾಹನಗಳು

4. ಠಾಣೆಯಲ್ಲಿ ಕಾರ್ಯ ನಿರ್ವಹಿಸಲು ಸಿಬ್ಬಂದಿಗಳು.

ಜೌರಾದ್ ಪಟ್ಟಣದಲ್ಲಿ ಕೇವಲ ತಾತ್ಕಾಲಿಕ ಕಟ್ಟಡವು ಲಭ್ಯವಿರುತ್ತದೆ. ಖಾಲಿ ಇರುವ ನೇರ ನೇಮಕಾತಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ, ಜೌರಾದ್ ಪಟ್ಟಣಕ್ಕೆ ಮಂಜೂರಾಗಿರುವ ವಾಹನಗಳನ್ನು ಖರೀದಿಸುವ ಬಗ್ಗೆ ಪರೀಶೀಲಿಸಲಾಗುತ್ತಿದೆ. ಈ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಂಡು ಅಗ್ನಿಶಾಮಕ ಠಾಣೆಯನ್ನು ತೆರೆಯಲಾಗುವುದು.

**ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ**

1208 ( 1438) ಶ್ರೀ ಗುರುಪಾದ ಗೌಡ ಸಂಗನ ಗೌಡ ಪಾಟೀಲ್ ( ರೋಣ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬರುವ ಬೇಸಿಗೆಯಲ್ಲಿ ಉಂಟಾಗುವ ವಿದ್ಯುತ್ ಕೊರತೆ ಎದುರಿಸಲು ಸರ್ಕಾರ ಕೈಗೊಂಡ ವಿಶೇಷ ಕ್ರಮಗಳೇನು;

ಆ) ರಾಜ್ಯದಲ್ಲಿ ಹೊಸದಾಗಿ ಆರಂಭಿಸಲು ಉದ್ದೇಶಿಸಿರುವ ವಿದ್ಯುತ್ ಉತ್ಪಾದನಾ ಕೇಂದ್ರಗಳೆಷ್ಟು;

ಇ) ಗಾಳಿ ಬಳಸಿ ವಿದ್ಯುತ್ ಉತ್ಪಾದನೆ : ಮಾಡಲು ಸರ್ಕಾರ ಇದುವರೆಗೂ ಮಾಡಿದ ಖರ್ಚು ಎಷ್ಟು? ಈ ಯೋಜನೆ ಫಲಪ್ರದ ವಾಗಿದೆಯೇ?

ಈ) ಗಜೇಂದ್ರಗಡ ನಗರದ ಹತ್ತಿರವಿರುವ ಕಾಲ ಕಾಲೇಶ್ವರ ಗುಡ್ಡದ ಮೇಲೆ ಗಾಳಿ ಬಳಸಿ ವಿದ್ಯುತ್ ಉತ್ಪಾದಿಸಲು ಸರ್ಕಾರ ಪರಿಶೀಲಿಸುವುದೇ?